ಓ ಎಸ್ ನಂ. 41/2016
ಪಿ ಡಬ್ಲ್ಯೂ: 1
ದಿನಾಂಕ 11-04-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: 2 ರಿಂದ 4ನೇ ಪ್ರತಿವಾದಿ ಪರ: ಶ್ರೀ ಕೆಎನ್‌ಎಂ ವಕೀಲರಿಂದ:

ಈ ದಾವೆಯಲ್ಲಿ ವಾದಿಗಳಾಗಿ ನಾವು 4 ಜನರಿದ್ದು, ನಮ್ಮಗಳ ಪೈಕಿ ಕೇಸನ್ನು ನಾನು ನಡೆಸುವ ಬಗ್ಗೆ ಮಾತುಕತೆಯಾಗಿದೆ, ಆದರೆ ಯಾವುದೇ ರೀತಿಯ ಬರವಣಿಗೆಯಾಗಿರುವುದಿಲ್ಲ. ಕರಾರುಪತ್ರದಲ್ಲಿ ಬಾಕಿ ಉಳಿದ ಹಣವನ್ನು ಪಡೆದುಕೊಂಡು ಇಂತಹ ದಿನವೇ ಬಂದು ನೊಂದಣಿ ಮಾಡಿಕೊಡಬೇಕೆಂದು ನಮೂದು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಂತಹ ದಿನವೇ ಬಂದು ನೊಂದಣಿ ಮಾಡಿಕೊಡಬೇಕೆಂದು ನಮೂದು ಮಾಡಿಲ್ಲ, ನೊಂದಣಿ ಮಾಡಿಕೊಡಬೇಕೆಂದು ನಮೂದು ಆಗಿರುತ್ತದೆ. ದಿನಾಂಕ 08/07/2016 ರವರೆಗೂ ವಾದಿ ಬಂದು ನೊಂದಣಿ ಮಾಡಿಕೊಡದೆ ಇದ್ದು, ಅಲ್ಲಿಯವರೆಗೆ ನೀವು ಹೋಗಿ ಅವರನ್ನು ನೊಂದಣಿ ಮಾಡುವಂತೆ ಕೇಳಿದ್ದೀರಾ ಎಂದರೆ ನಾವು ಅವರನ್ನು ಹಲವಾರು ಬಾರಿ ಕರೆದಿರುತ್ತೇವೆ ಎಂದು ನುಡಿದಿರುತ್ತಾರೆ.

ಕರಾರು ಆಗುವ ಕಾಲಕ್ಕೆ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿದ್ದ ಖಾತೆ ಮತ್ತು ಪಹಣಿ ನೋಡಿರುತ್ತೇನೆ. ಆಸ್ತಿಯು 1 ನೇಪ್ರತಿವಾದಿ ಹೆಸರಿನಲ್ಲಿರುವುದರಿಂದ ಒಪ್ಪಂದದ ಕರಾರುಪತ್ರವನ್ನು ಮಾಡಿಕೊಳ್ಳುವುದಿಲ್ಲವೆಂದು ನಾವು ಹೇಳಿರುತ್ತೇವೆ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯ ತಂದೆ ಆಸ್ತಿಯನ್ನು 1 ನೇ ಪ್ರತಿವಾದಿ ಹೆಸರಿಗೆ ಆಸ್ತಿಯನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ನಾವು 1 ನೇ ಪ್ರತಿವಾದಿ ಜತೆ ಕರಾರು ಮಾಡಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ನೀವೇನಾದರೂ 1 ನೇ ಪ್ರತಿವಾದಿಯ ತಂದೆ ಬಳಿ ದಾಖಲಾತಿಗೆ ಸಹಿ ಮಾಡಿ

ಎಂದು ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ವಿಭಾಗದ ಮೂಲಕ 1 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ನೀಡುತ್ತೇನೆ ಎಂದು ಹೇಳಿದ್ದರು ಎಂದು ನುಡಿದಿರುತ್ತಾರೆ.

ಕರಾರುಪತ್ರವಾಗುವ ಒಂದು ತಿಂಗಳ ಮೊದಲು ಮಾತುಕತೆಯು ನಡೆದಿರುತ್ತದೆ. ಮಾತುಕತೆಯು ತಾಲ್ಲೂಕು ಕಚೇರಿಯ ಎದುರುಗಡೆ ಇರುವ ಪ್ರಸನ್ನ ರವರ ಅಂಗಡಿಯಲ್ಲಿ ಆಗಿರುತ್ತದೆ. ಕರಾರುಪತ್ರವನ್ನು 1 ನೇ ಪ್ರತಿವಾದಿಯೇ ಬೆರಳಚ್ಚು ಮಾಡಿಸಿ ಇಟ್ಟಿದ್ದರು. ಕರಾರುಪತ್ರಕ್ಕೆ ಒಕ್ಕಣೆಯನ್ನು ಬೆರಳಚ್ಚು ಮಾಡುವ ಸಮಯದಲ್ಲಿ ನಾವು ಇರಲಿಲ್ಲ. ಸಾಕ್ಷಿ ಮುಂದುವರೆದು ನಾವು ಬರುವ ಮೊದಲೇ ಕರಾರುಪತ್ರವನ್ನು ಬೆರಳಚ್ಚು ಮಾಡಿಸಲಾಗಿತ್ತು ಎಂದು ನುಡಿದಿರುತ್ತಾರೆ. ಆದ್ದರಿಂದ ಅದರಲ್ಲಿರುವ ಒಕ್ಕಣೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪತ್ರಕ್ಕೆ ನನ್ನ ಸಮಕ್ಷಮ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸದರಿ ಪತ್ರಕ್ಕೆ ಮೊದಲನೆಯದಾಗಿ ಸಾಕ್ಷಿಯಾಗಿ ತ್ಯಾಗರಾಜ್, ಎರಡನೆಯದಾಗಿ ಮಂಜುನಾಥ ಮತ್ತು 3 ನೇಯದಾಗಿ ಶಿವಶಂಕರ್ ಎಂಬುವವರು ಸಹಿ ಮಾಡಿರುತ್ತಾರೆ. ಸಾಕ್ಷಿದಾರರನ್ನು ಯಾರು ಕರೆದುಕೊಂಡು ಬಂದಿರುವುದಿಲ್ಲ, ಆ ಸಮಯದಲ್ಲಿ ಅವರುಗಳು ಅಲ್ಲೆ ಇದ್ದರು.

1000 ರೂ ಮುಖಬೆಲೆಯ 20 ಲಕ್ಷ ರೂ, 500 ರೂ ಮುಖಬೆಲೆಯ 14 ಲಕ್ಷ ರೂಗಳು ಒಟ್ಟು 34 ಲಕ್ಷ ರೂ ಕೊಟ್ಟಿರುತ್ತೇವೆ. ಕರಾರುಪತ್ರದ ಹಳೆಯ ಅಸೆಸ್ಮೆಂಟ್ ನಂ.791, ಹೊಸ ನಂ. 1977/1 ಮತ್ತು 1914/1 ಆಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಸಣ್ಣತಿಮ್ಮಯ್ಯ ಮತ್ತು ಭೀರಪ್ಪನವರ ಆಸ್ತಿ, ಪಶ್ಚಿಮಕ್ಕೆ ಕೆ ಎಂ ರಸ್ತೆ, ಉತ್ತರಕ್ಕೆ ಭೀರಪ್ಪನವರ ಆಸ್ತಿ ಮತ್ತು ದಕ್ಷಿಣಕ್ಕೆ ಯಶೋಧಮ್ಮನವರ ಆಸ್ತಿ ಇರುತ್ತದೆ. ನಿಪಿ-3 ರ ದಾಖಲೆಯಲ್ಲಿ ನಾನು ಹೇಳಿದಂತಹ ಅಸೆಸ್ಮೆಂಟ್ ನಂಬರಿನ ಬಗ್ಗೆ ನಮೂದಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರವಾಗುವ ಕಾಲಕ್ಕೆ ದಾವಾ

ಆಸ್ತಿಯ ಚಕ್ಕುಬಂದಿಯನ್ನು ತೋರಿಸಲು ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ. ಅಂತಹ ದಾಖಲೆ ಎಂದರೆ ಪ್ರಮಾಣ ಪತ್ರವಾಗಿರುತ್ತದೆ. ಕರಾರಿನಲ್ಲಿರುವ ಅಸೆಸ್ಮೆಂಟ್ ನಂಬರು ಮತ್ತು ಚಕ್ಕುಬಂದಿಯನ್ನು ತೋರಿಸಲು ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪೂರ್ವಕ್ಕೆ ಯಶೋಧಮ್ಮನವರ ಸ್ವತ್ತು, ಪಶ್ಚಿಮಕ್ಕೆ ಸರ್ವೆ ನಂ.199 ಶೋಭ ಗೌತಮ್ ಮತ್ತು ಇತರರ ಸ್ವತ್ತು, ಉತ್ತರಕ್ಕೆ ಕೆ ಎಂ ರಸ್ತೆ ಮತ್ತು ದಕ್ಷಿಣಕ್ಕೆ ಸರ್ವೆ ನಂ.197 ಈ ಚಕ್ಕುಬಂದಿಯ ಆಸ್ತಿನಿಮಗೆ ಕರಾರು ಆಗಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಇದು ಒಟ್ಟು ಆಸ್ತಿಯಾಗಿದ್ದು ಇದರಲ್ಲಿ 272+198/2*150 ಅಡಿ ಆಸ್ತಿ ಮಾತ್ರ ನಮಗೆ ಕರಾರು ಆಗಿದ್ದು, ಅದಕ್ಕೆ ನಾನು ಹೇಳಿದ ಚಕ್ಕುಬಂದಿ ಬರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-1 ರಲ್ಲಿ ಇರುವ ಅಸೆಸ್ಮೆಂಟ್ ನಂ.1977/1 ಮತ್ತು 1914/1 ಎಂದರೆ ನಿಜ. ಅಸೆಸ್ಮೆಂಟ್ ನಂ. 791/1899 ಹೊಸ ನಂ.1977/3, 1914/3 ಇದು ನನಗೆ ಕರಾರು ಆಗಿಲ್ಲ ಎಂದರೆ ನಿಜ.

ದಾವಾ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. ಬಾಕಿ ಇರುವ 1 ಲಕ್ಷ ರೂಗಳನ್ನು ವಾದಿಗಳಾದ ನಮ್ಮ ಪೈಕಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನೊಂದಣಿ ಸಮಯದಲ್ಲಿ ಬಾಕಿ ಇರುವ 1 ಲಕ್ಷ ರೂಗಳನ್ನು ಕೊಡುತ್ತೇವೆಂದು ಹೇಳಿರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ-8 ರಲ್ಲಿ ಗುರುತಿಸಿರುವ ದಾಖಲೆಯು ದಾವಾ ಆಸ್ತಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಾನು ಅದನ್ನು ನೋಡಿ ಹೇಳಬಲ್ಲೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ವಕೀಲರು ನಿಪಿ-8 ರ ದಾಖಲೆಯನ್ನು ತೋರಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಸಾಕ್ಷಿ ನಿಪಿ-8 ರ ದಾಖಲೆಯಲ್ಲಿರುವ ಅಸೆಸ್ಮೆಂಟ್ ನಂ.

1977/3 ಮತ್ತು 1914/3 ದಾವಾ ಆಸ್ತಿಯಲ್ಲ ಎಂದರೆ ಸಾಕ್ಷಿಯು ಆಸ್ತಿಯು ಒಟ್ಟಾಗಿದ್ದು, ಅದರಲ್ಲಿ ನಮಗೆ ಅರ್ಧ ಮಾತ್ರ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ.

ನಿಪಿ-7 ರಲ್ಲಿ ಕಾಣಿಸಿರುವ ಆಸ್ತಿಯನ್ನು 2 ರಿಂದ 4 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಯಲ್ಲಿ ಯಾವುದೇ ರೀತಿಯ ತಕರಾರು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾವೆಯನ್ನು ಹೂಡಿದ ನಂತರ ನನಗೆ ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ ಎಂದು ನುಡಿದಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಖಾತೆಯಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಆದ್ದರಿಂದ ನಾನು ಯಾವುದೇ ರೀತಿಯ ತಕರಾರನ್ನು ಪುರಸಭೆಯಲ್ಲಿ ಮಾಡಿರುವುದಿಲ್ಲ. ಕರಾರುಪತ್ರವಾಗುವ ಕಾಲಕ್ಕೆ ಆಸ್ತಿಯು ಒಟ್ಟು 272+198/2*280 ಅಡಿ ವಿಸ್ತೀರ್ಣ ಇತ್ತು.

ನಿಪಿ-3 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಒಟ್ಟು 7 ಸ್ವತ್ತುಗಳನ್ನು ತೋರಿಸಲಾಗಿದೆ ಎಂದರೆ ಇರಬಹುದು. 2 ರಿಂದ 4 ನೇ ಪ್ರತಿವಾದಿಗಳಿಗೆ 08/02/2016 ರಂದು ಅಸೆಸ್ಮೆಂಟ್ ನಂ.1977/3 ಮತ್ತು 1914/3 ನ್ನು 1 ನೇ ಪ್ರತಿವಾದಿಯ ತಂದೆಯಿಂದ ಶುದ್ಧಕ್ರಯದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮೊದಲು ನಮಗೆ ಕರಾರು ಮಾಡಿಕೊಟ್ಟು ನಂತರ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ನಮಗೆ ಕರಾರುಪತ್ರ ಮಾಡಿಕೊಡುವ ಕಾಲಕ್ಕೆ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ, ಅಧಿಕಾರ ಮತ್ತು ಮಾಲೀಕತ್ವ ಇಲ್ಲದೆ ಇದ್ದರೂ ಸಹ ಕರಾರುಪತ್ರ ಮಾಡಲಾಗಿದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ತಂದೆ ಹೇಳಿ ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೂ 2 ರಿಂದ 4 ನೇ ಪ್ರತಿವಾದಿ ಖರೀದಿಸಿರುವ ಆಸ್ತಿ ಮತ್ತು ದಾವಾ ಆಸ್ತಿ ಬೇರೆ ಬೇರೆ ಎಂದರೆ ಸರಿಯಲ್ಲ. ಇವುಗಳ ಚಕ್ಕುಬಂದಿ ಮತ್ತು ಅಸೆಸ್ಮೆಂಟ್ ನಂಬರು

ಬೇರೆ ಬೇರೆ ಎಂದರೆ ಸರಿಯಲ್ಲ. ನಾನು ನೋಟೀಸನ್ನು 1 ನೇ ಪ್ರತಿವಾದಿ ತಂದೆಗೆ ಕೊಟ್ಟಿಲ್ಲ, 1 ನೇ ಪ್ರತಿವಾದಿಗೆ ನೀಡಿರುತ್ತೇನೆ.

1 ನೇ ಪ್ರತಿವಾದಿ ತಂದೆಗೆ ನೊಂದಣಿ ಮಾಡಿಕೊಡುವಂತೆ ನೋಟೀಸು ನೀಡಿರುವುದಿಲ್ಲ ಮತ್ತು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರ ಮಗನನ್ನು ಪಕ್ಷಗಾರನನ್ನಾಗಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೂ 2 ರಿಂದ 4 ನೇ ಪ್ರತಿವಾದಿಗಳಿಗೂ ಯಾವುದೇ ಸಂಬಂದ ಇಲ್ಲದೆ ಇದ್ದರೂ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಗಳು 1 ಕೋಟಿ 25 ಲಕ್ಷದ 25 ಸಾವಿರ ರೂಗಳಿಗೆ ಆಸ್ತಿಯನ್ನು ಖರೀದಿಸಿರುವುದರಿಂದ ಅವರಿಗೂ ದಾವಾ ಆಸ್ತಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅವರು ಸದ್ಭಾವ ಪೂರ್ವಕ ಖರೀದಿದಾರರು ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಈಗ ಸುಮಾರು 1.5 ಕೋಟಿ ರೂ ಬೆಲೆ ಬಾಳುವುದರಿಂದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾಹಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.